ಜಿಲ್ಲಾವಾರು ಮಾಹಿತಿ ಕೆಳಗಿನಂತಿದೆ

ಹೆದ್ದಾರಿ ದರೋಡೆ ಪ್ರಕರಣಗಳ ಬಗ್ಗೆ ಜಿಲ್ಲಾವಾರು ಅಂಕಿ ಅಂಶಗಳು ಈ ಕೆಳಕಂಡಂತೆ ಇವೆ.

	1988		1989		1990		1991	
	ದಾಖಲು	ಪತ್ತೆ	ದಾಖಲು	ಪತ್ತೆ	ದಾಖಲು	ಪತ್ತೆ	ದಾಖಲು	ಪತ್ತೆ
ಬೆಂಗಳೂರು ಜಿಲ್ಲೆ	-	-	1	1	-	-	1	-
ಕೋಲಾರ	-	-	2	1	2	-	7	1
ಮಂಡ್ಯ	1	1	-	-	-	-	-	-
ಚಿತ್ರದುರ್ಗ	-	-	-	-	2	1	3	-
ಬಳ್ಳಾರಿ	4	-	-	-	8	-	4	2
ಬಿಜಾಪುರ	-	-	1	1	-	-	1	-
ಧಾರವಾಡ	-	-	1	1	1	1	-	-
ಬೀದರ್	2	2	5	-	1	-	-	-
ರಾಯಚೂರು	2	1	5	2	5	4	2	-

ಬೆಳಗಾವಿ ಜಿಲ್ಲೆಯಲ್ಲಿ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಕುಡಿಯುವ ನೀರಿನ ಬಿಡುಗಡೆ ಮಾಡಿದ ಹಣ

2149 - ಶ್ರೀ ಶಿವಾನಂದ ಕೌಜಲಗಿ (ಬೈಲ ಹೊಂಗಲ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಬೆಳಗಾವಿ ಜಿಲ್ಲೆಯಲ್ಲಿ 1990-91ನೇ ಸಾಲಿನಲ್ಲಿ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಕುಡಿಯುವ ನೀರಿನ ಸಲುವಾಗಿ ಬಿಡುಗಡೆಮಾಡಿದ ಹಣವೆಷ್ಟು?

2) ಇದರ ಸಲುವಾಗಿ ಯಾವ ಯಾವ ಕೆಲಸಗಳನ್ನು ಎಲ್ಲೆಲ್ಲಿ ತೆಗೆದುಕೊಳ್ಳಲಾಗಿದೆ ಮತ್ತು ಅಂತಹ ಪ್ರತಿಯೊಂದು ಕೆಲಸಕ್ಕೆ ಬಿಡುಗಡೆ ಮಾಡಲಾದ ಹಣವೆಷ್ಟು?

3) ಕಾರ್ಯಕಾರಿ ಅಭಿಯಂತರು ಕರ್ನಾಟಕ ಅರ್ಬನ್ ವಾಟರ್ ಸಪ್ಲಾಯ್ ಬೆಳಗಾವಿ ಇವರಿಗೆ ವಹಿಸಿದ ಕೆಲಸಗಳೆಷ್ಟು? ಅವುಗಳನ್ನು ಎಂದು ವಹಿಸಿಕೊಡಲಾಗಿತ್ತು ಮತ್ತು ಅವುಗಳನ್ನು ಎಂದು ಪೂರ್ಣಗೊಳಿಸಬೇಕೆಂದು ಆದೇಶ ನೀಡಲಾಗಿತ್ತು?

4) ಕಾರ್ಯಕಾರಿ ಅಭಿಯಂತರು ಕರ್ನಾಟಕ ಅರ್ಬನ್ ವಾಟರ್ ಸಪ್ಲಾಯ್ ಬೆಳಗಾವಿ ಇವರಿಗೆ 1989,1990 ಮತ್ತು 1991ನೇ ಸಾಲಿನಲ್ಲಿ ಬರಗಾಲ ಕಾಮಗಾರಿ ಸಲುವಾಗಿ ಯಾವ ಯಾವ ಕೆಲಸಕ್ಕೆ ಎಷ್ಟು ಹಣ ಬಿಡುಗಡೆ ಮಾಡಲಾಯಿತು ಮತ್ತು ಎಷ್ಟು ಹಣ ವಿಚ್ರ್ಯು ಮಾಡಲಾಯಿತು?

5) ಕಾರ್ಯಕಾರಿ ಅಭಿಯಂತರು ಅರ್ಬನ್ ವಾಟರ್ ಸಪ್ಲಾಯ್ ಇವರಿಗೆ ವಹಿಸಿಕೊಟ್ಟ ಕೆಲಸಗಳನ್ನು ನಿಗದಿತ ವೇಳೆಯಲ್ಲಿ ಮಾಡದಿರುವ ಸಂಗತಿ ನಿಜವೇ? ಹಾಗಿದ್ದಲ್ಲಿ ಸರ್ಕಾರದವರು ಅವರ ಮೇಲೆ ಯಾವ ಕ್ರಮ ಕೈಗೊಂಡಿರುವರು?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು):

1) ಕುಡಿಯುವ ನೀರಿನ ಸಲುವಾಗಿ 1990-91ನೇ ಸಾಲಿನಲ್ಲಿ ಬೆಳಗಾವಿ ಜಿಲ್ಲೆಗೆ ಮುಖ್ಯಮಂತ್ರಿಗಳ ಅಭಾವ ಪರಿಹಾರ ನಿಧಿಯಡಿಯಲ್ಲಿ ಹಣ ಬಿಡುಗಡೆ ಮಾಡಿರುವುದಿಲ್ಲ.

2) ಮೇಲಿನ ಉತ್ತರದ ಅನುಗುಣವಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

3) 1990-91ನೇ ಸಾಲಿನಲ್ಲಿ ಸದರಿ ಅಭಾವ ಪರಿಹಾರ ನಿಧಿಯಡಿಯಲ್ಲಿ ಯಾವುದೇ ಹಣ ಬಿಡುಗಡೆ ಮಾಡಿಲ್ಲದ ಪ್ರಯುಕ್ತ ಈ ಪ್ರಶ್ನೆ ಉದ್ಭವಿಸುವುದಿಲ್ಲ.

4) 1988-89ರಲ್ಲಿ (ಮಾರ್ಚ್ 1989) 2.00 ಲಕ್ಷ ರೂಗಳು, 1989-90ನೇ ಸಾಲಿನಲ್ಲಿ ಒಟ್ಟು 11.00 ಲಕ್ಷರೂಗಳನ್ನು ಬೆಳಗಾವಿ ಜಿಲ್ಲೆಗೆ ಮುಖ್ಯ ಮಂತ್ರಿಗಳ ಬರಪರಿಹಾರ ನಿಧಿಯಡಿಯಲ್ಲಿ ಬಿಡುಗಡೆಮಾಡಲ್ಪಟ್ಟು ಈ ಪೈಕಿ 3,14,731-00 ರೂಗಳಷ್ಟು ಹಣವನ್ನು ಬೆಲೆಯ ಕೆಲವೆಡೆಗಳಲ್ಲಿ ತೆಗೆದುಕೊಳ್ಳಲಾದ ಕಾಮಗಾರಿಗಳಿಗಾಗಿ ವೆಚ್ಚಮಾಡಲಾಯಿತು (ವಿವರಗಳನ್ನು ಇದರ ಜೊತೆಯಲ್ಲಿ ಲಗತ್ತಿಸಲಾಗಿದೆ) 1990-91ನೇ ಸಾಲಿನ ಬೇಸಿಗೆ ಬರಪರಿಹಾರ ಕಾಮಗಾರಿ ಶೀರ್ಷಿಕೆಯಲ್ಲಿ ಒಟ್ಟು 13.77 ಲಕ್ಷ ರೂಗಳ ವೆಚ್ಚದಲ್ಲಿ ಕೊಳವೆ ಬಾವಿಗಳನ್ನು ಕೊರೆಯಲಾಗಿದ್ದು ಈ ಕಾಮಗಾರಿಗಳಿಗಾಗಿ 24-4-91 ರಲ್ಲಿ 5.00 ಲಕ್ಷ ರೂಗಳು ಮತ್ತು 21-6-91 ರಲ್ಲಿ 5.00 ಲಕ್ಷ ರೂಗಳು ಹೀಗೆ ಒಟ್ಟು 10.00 ಲಕ್ಷ ರೂಗಳು ಮಾತ್ರ ಬೆಳಗಾವಿ ಜಿಲ್ಲಾಧಿಕಾರಿಗಳವರಿಂದ ಕೊಡಲ್ಪಟ್ಟಿದೆ. ವಿವಿಧ ಪಟ್ಟಣ ಪ್ರದೇಶಗಳಲ್ಲಿ ತೆಗೆದುಕೊಳ್ಳಲಾದ ಕಾಮಗಾರಿಗಳ ವಿವರಗಳನ್ನು ಇದರ ಜೊತೆಯಲ್ಲಿ ಲಗತ್ತಿಸಲಾದ ಪತ್ರದಲ್ಲಿ ಕೊಡಲಾಗಿದೆ.

1991-92ನೇ ಸಾಲಿನಲ್ಲಿ ಬೆಳಗಾವಿ ವಿಭಾಗಕ್ಕೆ ಸಂಬಂಧಿಸಿದಂತೆ ಅಭಾವ ಪರಿಹಾರ ನಿಧಿಯಡಿಯಲ್ಲಿ ಯಾವುದೇ ಹಣ ಬಿಡುಗಡೆಯಾಗಿರುವುದಿಲ್ಲ.

5) ಬೆಳಗಾವಿ ಜಿಲ್ಲೆಗೆ, ಸಂಬಂಧಿಸಿದಂತೆ ಬರಪರಿಹಾರ ಕಾಮಗಾರಿಯಡಿಯಲ್ಲಿ ಹಣ ಬಿಡುಗಡೆ ಮಾಡಲ್ಪಟ್ಟು ಕಾಮಗಾರಿಗಳ ಪೈಕಿ ರಾಮದುರ್ಗ ಪಟ್ಟಣ ಒಂದನ್ನು ಬಿಟ್ಟು ಉಳಿದೆಲ್ಲಾ ಕಾಮಗಾರಿಯನ್ನು ಕಾರ್ಯಗತಗೊಳಿಸಲಾಗಿದೆ.

ರಾಮದುರ್ಗ ಪಟ್ಟಣಕ್ಕೆ ಸಂಬಂಧಿಸಿದಂತೆ ಕಾಮಗಾರಿಗಳ ಲಕ್ಷಣಗಳು ಬೇರೆ ಬೇರೆಯಾಗಿರುತ್ತದೆ. ಈ ಪ್ರಸ್ಥಾವನೆಯಲ್ಲಿ ಉದ್ದೇಶಿತ ಕೆಲಸಗಳ ವಿವರಗಳು ಹೀಗಿವೆ.

ಹಾಲಿ ಇರುವ ಜಾಕ್‌ವೆಲ್‌ನಲ್ಲಿ ಹೊಸ ರೇಚಕ (ಪಂಪ್‌ಸೆಟ್)ವನ್ನು ಅಳವಡಿಸುವುದು. ಹಾಲಿ ಇರುವ ಶುದ್ಧೀಕರಣಗಾರವನ್ನು ಅಭಿವೃದ್ಧಿಗೊಳಿಸುವುದು ಮತ್ತು ಹೊಸದಾಗಿ ಕೊಳವೆ ಮಾರ್ಗವನ್ನು (ಪೈಪ್‌ಲೈನ್) ಹಾಕುವುದು.

ಈ ಮೂರು ಕೆಲಸಗಳಿಗೆ ಬಿಡುಗಡೆ ಮಾಡಲ್ಪಟ್ಟಿರುವ ಹಣವು ಸಾಲದಾಗಿರುತ್ತದೆ.

ಕಾರ್ಯಪಾಲಕ ಅಭಿಯಂತರು, ಬೆಳಗಾವಿ ವಿಭಾಗ ಇವರು ಪೈಲೈನಿಗೆ ಸಂಬಂಧಿಸಿದಂತೆ ಟೆಂಡರ್ ಕರೆದಿದ್ದು ಸದರಿ ಟೆಂಡರ್‌ನ್ನು ನ್ಯೂನತೆಯ ಕಾರಣ ಒಪ್ಪಿಕೊಳ್ಳಲಾಗಲಿಲ್ಲ ಮತ್ತೆ ಹೊಸದಾಗಿ ಬೇರೆ ವ್ಯವಸ್ಥೆ ಮಾಡಿದ್ದು ಅದರಂತೆ ಈಗಾಗಲೇ ಪೈಪುಗಳನ್ನು ಸರಬರಾಜು ಮಾಡಲಾಗುತ್ತಿದೆ. ಹಾಗೂ ಪಂಪಿಂಗ್ ಮೆಷಿನರಿಗಾಗಿ ಟೆಂಡರ್‌ನ್ನು ಕರೆಯಲಾಗಿದೆ.

ಅನುಬಂಧ

1989-90 ರಲ್ಲಿ ಮುಖ್ಯ ಮಂತ್ರಿಗಳ ಬರಪರಿಹಾರ ನಿಧಿಯಿಂದ ಬಿಡುಗಡೆಮಾಡಿದ ಹಣದ ಬಗ್ಗೆ ವರದಿ ಪತ್ರ.

ಕ್ರಮ ಸಂಖ್ಯೆ	ಪಟ್ಟಣದ ಹೆಸರು	ಸರ್ಕಾರಿ ಆದೇಶ ಸಂಖ್ಯೆ ದಿನಾಂಕ	ಬಿಡುಗಡೆಯಾದ ಹಣ	ಉದ್ದೇಶಿತ ಕಾಮಗಾರಿಗಳು	ವೆಚ್ಚಮಾಡಲಾದ ಹಣ	ಪರಾ
1	ಬೈಲಹೊಂಗಲ	ಹೆಚ್‌ಯುಡಿ, ಟಿಎಂಎಂ, 89, ದಿನಾಂಕ 29-3-89 ಮತ್ತು ಸಂಖ್ಯೆ 779 ಸಿಆರ್‌ಎಸ್ 89 ದಿನಾಂಕ 29-4-89	0.50 ಲಕ್ಷ 0.50 ಲಕ್ಷ	ಗೊಲ್ಲರ ಕೇರಿಯಲ್ಲಿ ಇದ್ದ ಕೊಳವೆ ಭಾವಿಗೆ ವಿದ್ಯುತ್‌ಪಂಪನ್ನು ಆಳವಡಿಸುವುದು ಮತ್ತು ಮುಖ್ಯ ಕೊಳವೆಗೆ ಜೋಡಣೆ ಮಾಡುವುದು.	ರೂ. ೬೮,೭೦೫೦೦	ಕಾಮಗಾರಿ ಮುಗಿದಿರುತ್ತದೆ ಮತ್ತು ಕಾರ್ಯಗತ ಗೊಳಿಸಲಾಗಿದೆ.
2	ರಾಮದುರ್ಗ	ಹೆಚ್‌ಯುಡಿ, ಟಿಎಂಎಂ, 89, ದಿನಾಂಕ 29-3-89 ಮತ್ತು ಸಂಖ್ಯೆ 770 ಸಿಆರ್‌ಎಸ್ 89 ದಿನಾಂಕ 21-4-89	೧.೫೦ ಲಕ್ಷ 5.00 ಲಕ್ಷ 2.50 ಲಕ್ಷ 9.00 ಲಕ್ಷ	ರಾಮದುರ್ಗ ಪಟ್ಟಣಕ್ಕೆ ಸುಧಾರಿತ ಕುಡಿಯುವ ನೀರಿನ ಯೋಜನೆಯನ್ನು ಅಭಿವೃದ್ಧಿ ಪಡಿಸುವುದು.	ರೂ.೯,೮೦೦೦೦	-
3	ಖಾನಾಪುರ	ಸರ್ಕಾರಿ ಆದೇಶ ಸಂಖ್ಯೆ 770, ಸಿಆರ್‌ಎಸ್ 89 ದಿನಾಂಕ 21-4-89	2.00 ಲಕ್ಷ	೨೫ ಅಶ್ವಶಕ್ತಿಯ ಪಂಪನ್ನು ಜಾಕ್‌ವೆಲ್‌ನಲ್ಲಿ ಆಳವಡಿಸುವುದು ಮತ್ತು ಹಳೇ ಪಂಪು ರಿಪೇರಿ ಮಾಡುವಿಕೆ	ರೂ.1,46,068-00	ಕಾಮಗಾರಿಯು ಮುಗಿದಿರುತ್ತದೆ ಮತ್ತು ಕಾರ್ಯಗತ ಗೊಳಿಸಲಾಗಿದೆ.
4	ಚಿಕ್ಕೋಡಿ	ಸರ್ಕಾರಿ ಆದೇಶ ಸಂಖ್ಯೆ 770, ಸಿಆರ್‌ಎಸ್ 89 ದಿನಾಂಕ 21-4-89	೧.೦೦ ಲಕ್ಷ	ಎರಡು ಕುಸಳವೆ ಭಾವಿಗಳನ್ನು ಕೊರೆಯುವುದು ಮತ್ತು ಪಂಪ್‌ಗಳನ್ನು ಆಳವಡಿಸುವುದು.	ರೂ.೯೦,೧೫೮ ೦೦	ಕಾಮಗಾರಿಯು ಮುಗಿದಿರುತ್ತದೆ (ಒಂದು ಪವರ್ ಪಂಪ್ ಮತ್ತು ಹ್ಯಾಂಡ್ ಪಂಪ್ ಆಳವಡಿಸಲಾಗಿದೆ.)

1990-91 ರಲ್ಲಿ ತೆಗೆದುಕೊಂಡ ಕಾಮಗಾರಿಗಳ ವಿವರವನ್ನು ತೋರಿಸುವ ಪೂರಕ ಪ್ರಪತ್ರ

ಕ್ರ ಸಂ	ಪಟ್ಟಣದ ಹೆಸರು	ಕೊಳವೆ ಬಾವಿಗಳನ್ನು ತೊಡಿದ ಸಂಖ್ಯೆ	ಯಶಸ್ವಿಯಾದ ಕೊಳವೆ ಭಾವಿಗಳ ಸಂಖ್ಯೆ	ಯಶಸ್ವಿಯಾಗಿಲ್ಲದ ಕೊಳವೆ ಭಾವಿಗಳ ಸಂಖ್ಯೆ	ಕೈಪಂಪ್ ಅಳವಡಿಸಿದ ಕೊಳವೆ	ವಿದ್ಯುತ್ ಪಂಪ್ ಅಳವಡಿಸಿದ ಕೊಳವೆ	ಜಿಲ್ಲಾಧಿಕಾರಿಗಳು ಬಿಡುಗಡೆ ಮಾಡಿದ ಹಣ	ಒಟ್ಟಾರೆ ಖರ್ಚಾದ ಹಣ	ಷರಾ
1	2	3	4	5	6	7	8	9	10
1	ಚಿಕ್ಕೋಡಿ	15	14	1	7	4	-	-	ಒಟ್ಟು ೧೫ ಕೊಳವೆ ಭಾವಿಗಳನ್ನು ಕೊರೆಯಲಾಗಿದ್ದು ಅವುಗಳಲ್ಲಿ ೧೪ ಯಶಸ್ವಿಯಾಗಿದೆ ಇವುಗಳಲ್ಲಿ ೭ಕ್ಕೆ ಕೈಪಂಪ್ ಮತ್ತು ೪ಕ್ಕೆ ವಿದ್ಯುತ್ ಪಂಪ್ ಅಳವಡಿಸಲಾಗಿದೆ ಮತ್ತು ಉಳಿದ ೩ ಕೊಳವೆ ಭಾವಿಗಳಿಗೆ ಜಿಲ್ಲಾಧಿಕಾರಿಗಳಿಂದ ಹಣ ಬಂದ ನಂತರ ವಿದ್ಯುತ್ ಪಂಪ್ ಮೂಲಕ ಕಾರ್ಯಾಗತಗೊಳಿಸಲು ಉದ್ದೇಶಿಸಲಾಗಿದೆ.
2	ಹುಕ್ಕೇರಿ	4	-	4	-	-	-	-	೪ ಕೊಳವೆ ಭಾವಿಗಳು ಸಹ ನಿಶ್ಪಯೋಜಕವಾಗಿದೆ. ಈಗ ಕೋಟಬಾಗಿ ಮಾಲಕ ಹರಿಯುತ್ತಿರುವ ಘಟಪ್ರಭಾ ನದಿಯಿಂದ ನೀರು ಸರಬರಾಜು ಯೋಜನೆಯನ್ನು ಕೈಗೊಂಡು ಕಾಮಗಾರಿಯ ಪ್ರಗತಿಯಲ್ಲಿದೆ.
3	ಮೂಡಲಗಿ	3	6	-	-	-	-	-	೩ ಕೊಳವೆ ಭಾವಿಗಳನ್ನು ಕೊರೆಯಲಾಗಿ ಎಲ್ಲವೂ ಯಶಸ್ವಿಯಾಗಿದೆ ಮತ್ತು ಇವುಗಳನ್ನು ಜಿಲ್ಲಾಧಿಕಾರಿಯವರಿಂದ ಹಣ ಬಂದ ಮೇಲೆ ವಿದ್ಯುತ್ ಚಾಲಿತ ಪಂಪ್‌ಗಳನ್ನು ಆಳವಡಿಸಲು ಉದ್ದೇಶಿಸಲಾಗಿದೆ.
4	ಸಂಕೇಶ್ವರ	3	3	-	-	3	ರೂ. 10 ಲಕ್ಷ	ರೂ. ೧೩.೭೭ ಲಕ್ಷ	ಕೊರೆದ ೩ ಕೊಳವೆ ಭಾವಿಗಳು ಯಶಸ್ವಿಯಾಗಿದೆ ಇವುಗಳಿಗೆ ವಿದ್ಯುತ್ ಚಾಲಿತ ಪಂಪುಗಳನ್ನು ಹಾಕಿ ಕಾರ್ಯಗತಗೊಳಿಸಲಾಗಿದೆ.

5	ನಿಪ್ಪಾಣಿ	12	12	-	-	-			ಕೊರೆದ ೧೨ ಕೊಳವೆ ಭಾವಿಗಳು ಸಹ ಯಶಸ್ವಿಯಾಗಿದೆ ಇವುಗಳಿಗೆ ವಿದ್ಯುತ್ ಚಾಲಿತ ಪಂಪನ್ನು ನಿಪ್ಪಾಣಿ ಪುರಸಭೆಯವರು ಮಾಡುತ್ತಾರೆ.
6	ಬೈಲ ಹೊಂಗಲ	4	4	-	-	-			೪ ಕೊಳವೆ ಭಾವಿಗಳು ಯಶಸ್ವಿಯಾಗಿದ್ದು ೨ಕ್ಕೆ ಕೈಪಂಪು ಮತ್ತು ೨ಕ್ಕೆ ವಿದ್ಯುತ್ ಪಂಪುಗಳನ್ನು ಆಳವಡಿಸುವ ಯೋಜನೆಯನ್ನು ಜಿಲ್ಲಾಧಿಕಾರಿ ಯವರಿಂದ ಅನುದಾನ ಬಿಡುಗಡೆಯಾದ ನಂತರ ಕೈಗೆತ್ತಿಕೊಳ್ಳಲಾಗುವುದು.
7	ಭೆಳಗಾಂ ನಗರ ಪ್ರದೇಶ (ದಂಡು ಪ್ರದೇಶ ಬೆಟ್ಟು)	4	4	1	2	1			ನಾಲ್ಕು ಕೊಳವೆ ಭಾವಿ ಕೊರೆದು ಮೂರು ಯಶಸ್ವಿಯಾಗಿವೆ. ೨ ಕೊಳವೆ ಬಾವಿಗೆ ಕೈಪಂಪು ಆಳವಡಿಸಲಾಗಿದೆ ಒಂದು ಕೊಳವೆ ಭಾವಿಗಳನ್ನು ಅನುದಾನ ಬಿಡುಗಡೆಯಾದ ನಂತರ ಕೈಗೆತ್ತಿಕೊಳ್ಳಲಾಗುವುದು.

ಟಿಪ್ಪಣಿ : ಸದರಿ ಕಾಮಗಾರಿಗಳನ್ನು 1990-91ರಲ್ಲಿ ಕೈಗೆತ್ತಿಕೊಳ್ಳಲಾಗಿದೆ ಆದರೆ ಜಿಲ್ಲಾಧಿಕಾರಿಗಳು 1991-92ರಲ್ಲಿ 10 ಲಕ್ಷ ರೂಗಳನ್ನು ಬಿಡುಗಡೆ ಮಾಡಿರುತ್ತಾರೆ. ಮೇಲಾಗಿ ಈ ಕಾಮಗಾರಿಗಳಿಗೆ ಈಗಾಗಲೇ 13.77 ಲಕ್ಷ ರೂಗಳು ಖರ್ಚಾಗಿರುತ್ತವೆ. ಉಳಿದ ಕೊಳವೆ ಭಾವಿಗಳಿಗೂ ಪಂಪುಗಳನ್ನು ಆಳವಡಿಸಲು ಕಾರ್ಯಪಾಲಕ ಅಭಿಯಂತರು ಜಿಲ್ಲಾಧಿಕಾರಿಗಳನ್ನು 9.77 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಲು ಕೋರಿರುತ್ತಾರೆ.